ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 04-01-1980.

# *ವರ್ತಮಾನದ ರಾಜ್ಯಾಧಿಕಾರಿಯೇ ಭವಿಷ್ಯದ ರಾಜ್ಯಾಧಿಕಾರಿ*

(वर्तमान राज्य अधिकारी ही भविष्य राज्य अधिकारी)

**ವಿದೇಶಿ ಸಹೋದರ ಸಹೋದರಿಯರೊಂದಿಗೆ ಅವ್ಯಕ್ತ ಬಾಪ್‌ದಾದಾರವರ ಮಿಲನ.**

ಎಲ್ಲರೂ ತಮ್ಮನ್ನು ಡಬಲ್ ರಾಜ್ಯಾಧಿಕಾರಿ ಎಂದು ತಿಳಿಯುತ್ತೀರಾ? ವರ್ತಮಾನವೂ ಸಹ ರಾಜ್ಯಾಧಿಕಾರಿ ಮತ್ತು ಭವಿಷ್ಯದಲ್ಲಿಯೂ ರಾಜ್ಯಾಧಿಕಾರಿ, ವರ್ತಮಾನವು ಭವಿಷ್ಯದ ದರ್ಪಣವಾಗಿದೆ. ವರ್ತಮಾನ ಸ್ಥಿತಿ ಅರ್ಥಾತ್ ದರ್ಪಣದ ಮೂಲಕ ತಮ್ಮ ಭವಿಷ್ಯವನ್ನು ಸ್ಪಷ್ಟವಾಗಿ ನೋಡಿಕೊಳ್ಳಲು ಸಾಧ್ಯವಿದೆ. ವರ್ತಮಾನ ಹಾಗೂ ಭವಿಷ್ಯದ ರಾಜ್ಯಾಧಿಕಾರಿಯಾಗುವುದಕ್ಕಾಗಿ, ಸದಾ ಇದನ್ನು ಪರಿಶೀಲನೆ ಮಾಡಿರಿ- ನನ್ನಲ್ಲಿ ಪರಿಪಾಲಿಸುವ ಶಕ್ತಿಯು ಎಲ್ಲಿಯವರೆಗೆ ಇದೆ, ಮೊದಲು ಸೂಕ್ಷ್ಮ ಶಕ್ತಿಗಳು ಅರ್ಥಾಥ್ ಯಾರು ವಿಶೇಷವಾದ ಕಾರ್ಯಕರ್ತರೋ ಅವರ ಮೇಲೆ ಎಲ್ಲಿಯವರೆಗೆ ನನ್ನ ಅಧಿಕಾರವಿದೆ. ಸಂಕಲ್ಪ ಶಕ್ತಿಯ ಮೇಲೆ, ಬುದ್ಧಿಯ ಮೇಲೆ ಮತ್ತು ಸಂಸ್ಕಾರದ ಮೇಲೆ- ವಿಶೇಷವಾಗಿ ಈ ಮೂರೂ ಶಕ್ತಿಗಳು ರಾಜ್ಯಾಧಿಕಾರಿಯನ್ನಾಗಿ ಮಾಡುವುದರಲ್ಲಿ ಸದಾ ಸಹಯೋಗಿ ಅಂದರೆ ರಾಜ್ಯದ ಕಾರೋಬಾರನ್ನು ನಡೆಸುವಂತಹ ಮುಖ್ಯಸಹಯೋಗಿ ಕಾರ್ಯಕರ್ತರಾಗಿದ್ದಾರೆ. ಒಂದು ವೇಳೆ ಈ ಮೂವರೂ ಕಾರ್ಯಕರ್ತರು ತಾವು ಆತ್ಮ ಅರ್ಥಾತ್ ರಾಜ್ಯಾಧಿಕಾರಿಯ ರಾಜನ ಸೂಚನೆಯಂತೆ ನಡೆಯುತ್ತದ್ದರೆ ಸದಾ ಅವರ ರಾಜ್ಯವು ಯಥಾರ್ಥ ರೀತಿಯಿಂದ ನಡೆಯುತ್ತದೆ. ಹೇಗೆ ತಂದೆಯವರೂ ಸಹ ಮೂರು ಮೂರ್ತಿಗಳ ಮುಖಾಂತರ ಕಾರ್ಯವನ್ನು ಮಾಡಿಸಬೇಕಾಗುತ್ತದೆ. ಆದ್ದರಿಂದ 'ತ್ರಿಮೂರ್ತಿ'ಯ ವಿಶೇಷ ಗಾಯನ ಮತ್ತು ಪೂಜೆಯಾಗುತ್ತದೆ. ತ್ರಿಮೂರ್ತಿ ಶಿವ ಎಂದು ಹೇಳುತ್ತಾರೆ ಒಬ್ಬ ತಂದೆಗೆ ಮೂವರು ವಿಶೇಷ ಕಾರ್ಯಕರ್ತರು, ಅವರ ಮೂಲಕ ವಿಶ್ವದ ಕಾರ್ಯವನ್ನು ಮಾಡಿಸುತ್ತಾರೆ. ಅದೇ ರೀತಿ ತಾವು ಆತ್ಮರು ರಚಯಿತರಾಗಿದ್ದೀರಿ ಮತ್ತು ಈ ಮೂರು ವಿಶೇಷವಾದ ಶಕ್ತಿಗಳು ಅರ್ಥಾತ್ ತ್ರಿಮೂರ್ತಿ ಶಕ್ತಿಗಳು, ತಮ್ಮ ವಿಶೇಷವಾದ ಕಾರ್ಯಕರ್ತರಾಗಿದ್ದಾರೆ. ತಾವೂ ಸಹ ಈ ಮೂರರ ರಚನೆಯ ರಚಯಿತನಾಗಿದ್ದೀರಿ. ಅಂದಮೇಲೆ ಪರಿಶೀಲನೆ ಮಾಡಿರಿ- ತ್ರಿಮೂರ್ತಿ ರಚನೆಯು ತಮ್ಮ ನಿಯಂತ್ರಣದಲ್ಲಿ ಇದೆಯೇ?

ಮನಸ್ಸಾಗಿದೆ- ಉತ್ಪನ್ನ ಮಾಡುವವರು ಅರ್ಥಾತ್ ಸಂಕಲ್ಪವನ್ನು ರಚಿಸುವವರು. ಬುದ್ಧಿಯಾಗಿದೆ- ನಿರ್ಣಯ ಮಾಡುವುದು ಅರ್ಥಾತ್ ಪಾಲನೆಯ ಸಮಾನ ಕಾರ್ಯವನ್ನು ಮಾಡುವುದು. ಸಂಸ್ಕಾರವಾಗಿದೆ- ಒಳ್ಳೆಯ ಅಥವಾ ಕೆಟ್ಟದರ ಪರಿವರ್ತನೆ ಮಾಡಿಸುವವರು. ಹೇಗೆ ಬ್ರಹ್ಮಾ ಆದಿದೇವನೋ ಹಾಗೆಯೇ ಮೊದಲ ಆದಿಶಕ್ತಿಯಾಗಿದೆ- 'ಮನಸ್ಸು' ಅರ್ಥಾತ್ ಸಂಕಲ್ಪ ಶಕ್ತಿ, ಆದಿಶಕ್ತಿಯು ಯಥಾರ್ಥವಾಗಿದೆಯೆಂದರೆ, ಉಳಿದ ಇನ್ನೂ ಕಾರ್ಯಕರ್ತರು ಅವರ ಜೊತೆ ಯಥಾರ್ಥವಾಗಿ ಕಾರ್ಯವನ್ನು ಮಾಡುವವರಾಗಿರುತ್ತಾರೆ. ಮೊದಲು ಇದನ್ನು ಪರಿಶೀಲನೆ ಮಾಡಿರಿ- ರಾಜನಾದ ನನ್ನ ಮೊದಲ ಆದಿ ಕಾರ್ಯಕರ್ತನು, ಸದಾ ಸಮೀಪದ ಜೊತೆಗಾರನ ಸಮಾನ ಸೂಚನೆಯಂತೆ ನಡೆಯುತ್ತದೆಯೇ. ಏಕೆಂದರೆ ಮಾಯಾಶತ್ರುವೂ ಸಹ ಮೊದಲು ಇದೇ ಆದಿಶಕ್ತಿಯನ್ನು ದ್ರೋಹಿಯನ್ನಾಗಿ ಮಾಡುತ್ತದೆ. ಮತ್ತು ರಾಜ್ಯಾಧಿಕಾರವನ್ನು ತೆಗೆದುಕೊಳ್ಳುವ ಪ್ರಯತ್ನಪಡುತ್ತದೆ. ಆದ್ದರಿಂದ ಆದಿಶಕ್ತಿಯನ್ನು ಸದಾ ತಮ್ಮ ಅಧಿಕಾರದ ಶಕ್ತಿಯ ಆಧಾರದ ಮೇಲೆ ಸಹಯೋಗಿ, ವಿಶೇಷವಾದ ಕಾರ್ಯಕರ್ತನನ್ನಾಗಿ ಮಾಡಿಕೊಂಡು ನಡೆಸಿರಿ. ಹೇಗೆ ರಾಜನು ಯಾವುದೇ ಕಾರ್ಯವನ್ನು ಸ್ವಯಂ ಮಾಡುವುದಿಲ್ಲ, ಮಾಡಿಸುತ್ತಾನೆ. ರಾಜ್ಯಕಾರೋಬಾರು ಮಾಡುವವರು ಬೇರೆ ಇರುತ್ತಾರೆ. ಒಂದು ವೇಳೆ ರಾಜ್ಯಕಾರೋಬಾರು ಸರಿಯಾಗಿ ಇರಲಿಲ್ಲವೆಂದರೆ ರಾಜ್ಯವು ಅಲ್ಲೋಲ-ಕಲ್ಲೋಲವಾಗುತ್ತದೆ. ಅದೇರೀತಿ ಆತ್ಮನೂ ಸಹ ಮಾಡಿಸುವವನಾಗಿದೆ, ಮಾಡುವವರು ಈ ವಿಶೇಷ ತ್ರಿಮೂರ್ತಿ ಶಕ್ತಿಗಳಾಗಿವೆ. ಮೊದಲು ಇವುಗಳ ಮೇಲೆ

ಪರಿಪಾಲಿಸುವ ಶಕ್ತಿಯಿದ್ದರೆ, ಈ ಸಾಕಾರ ಕರ್ಮೇಂದ್ರಿಯಗಳು ಅದರ ಆಧಾರದ ಮೇಲೆ ಸರಿಯಾದ ದಾರಿಯಲ್ಲಿ ನಡೆಯುತ್ತದೆ. ಕರ್ಮೇಂದ್ರಿಯಗಳನ್ನು ನಡೆಸುವವರೂ ಸಹ ವಿಶೇಷವಾಗಿ ಈ ಮೂರುಶಕ್ತಿಗಳೇ ಆಗಿವೆ. ಈಗ ಪರಿಪಾಲಿಸುವ ಶಕ್ತಿಯು ಎಲ್ಲಿಯವರೆಗೆ ಬಂದಿದೆ ಎಂಬುದನ್ನು ಪರಿಶೀಲನೆ ಮಾಡಿರಿ. ಹೇಗೆ ಡಬಲ್ ವಿದೇಶಿಯಾಗಿದ್ದೀರೋ ಹಾಗೆಯೇ ಡಬಲ್ ಪರಿಪಾಲಿಸುವವರಾಗಿದ್ದೀರಾ? ಪ್ರತಿಯೊಬ್ಬರ ರಾಜ್ಯಕಾರೋಬಾರು ಅರ್ಥಾತ್ ಸ್ವರಾಜ್ಯವು ಸರಿಯಾಗಿ ನಡೆಯುತ್ತಿದೆಯೇ? ಹೇಗೆ ಸತ್ಯಯುಗದ ಸೃಷ್ಟಿಗಾಗಿ ಹೇಳುತ್ತಾರೆ- ಒಂದು ರಾಜ್ಯ, ಒಂದು ಧರ್ಮವಿದೆ. ಅದೇ ರೀತಿ ಈಗ ಸ್ವರಾಜ್ಯದಲ್ಲಿಯೂ ಸಹ ಒಂದು ರಾಜ್ಯ ಅರ್ಥಾತ್ ಸ್ವಯಂನ ಆಜ್ಞೆಯಂತೆ ಸರ್ವರೂ ನಡೆಯಬೇಕು. ಒಂದು ಧರ್ಮ ಅರ್ಥಾತ್ ಒಂದೇ ಧಾರಣೆಯು ಎಲ್ಲರದಾಗಿರಬೇಕು- ಸದಾ ಶ್ರೇಷ್ಠಾಚಾರಿ ಏರುವ ಕಲೆಯಲ್ಲಿ ನಡೆಯಬೇಕಾಗಿದೆ. ಮನಸ್ಸು ತನ್ನ ಮನ್ಮತದಂತೆ ನಡೆಸುತ್ತದೆ, ಬುದ್ಧಿಯು ತನ್ನ ನಿರ್ಣಯಶಕ್ತಿಯ ಏರುಪೇರು ಮಾಡುತ್ತದೆ- ಸೇರ್ಪಡೆ ಮಾಡುತ್ತದೆ, ಸಂಸ್ಕಾರವು ಆತ್ಮನನ್ನೂ ಮಂಗ(ಕೋತಿ)ನರ್ತನೆ ಮಾಡಿಸುತ್ತಿದೆ ಎಂದರೆ ಇದಕ್ಕೆ ಒಂದು ಧರ್ಮವೆಂದು ಹೇಳುವುದಿಲ್ಲ. ಒಂದು ರಾಜ್ಯವೆಂದು ಹೇಳುವುದಿಲ್ಲ. ಅಂದ ಮೇಲೆ ತಮ್ಮ ರಾಜ್ಯದ ಸ್ಥಿತಿಯೇನಾಗಿದೆ? ತ್ರಿಮೂರ್ತಿ ಶಕ್ತಿಗಳು ಸರಿಯಾಗಿದೆಯೇ? ಕೆಲವೊಮ್ಮೆ ಸಂಸ್ಕಾರವು ಮಂಗನರ್ತನೆಯನ್ನಂತು ಮಾಡಿಸುವುದಿಲ್ಲ ತಾನೇ? ಮಂಗವು ಏನು ಮಾಡುತ್ತದೆ- ಮೇಲೆಕೆಳಗೆ ಜಂಪ್ ಮಾಡುತ್ತಿರುತ್ತದೆಯಲ್ಲವೆ. ಸಂಸ್ಕಾರವೂ ಸಹ ಈಗೀಗ ಏರುವ ಕಲೆ, ಈಗೀಗ ಬೀಳುವ ಕಲೆ, ಇದು ಮಂಗನ ನರ್ತನೆಯಲ್ಲವೆ. ಅಂದಮೇಲೆ ಈ ಸಂಸ್ಕಾರವೂ ನರ್ತನೆ ಮಾಡಿಸುವುದಿಲ್ಲವೇ? ಎಲ್ಲವೂ ನಿಯಂತ್ರಣದಲ್ಲಿದೆಯೇ? ಯಾವಾಗಲಾದರೂ ಬುದ್ಧಿಯು ಸೇರ್ಪಡೆ(ಕಲ್ತಿ)ಯನ್ನಂತು ಮಾಡುವುದಿಲ್ಲ ತಾನೇ? ಹೇಗೆ ವರ್ತಮಾನದಲ್ಲಿ ಸೇರ್ಪಡೆ ಮಾಡುತ್ತಾರೆ, ಅಂದಾಗ ನಿರ್ಣಯಶಕ್ತಿಯೂ ಸೇರ್ಪಡೆ ಮಾಡಿಬಿಡುತ್ತದೆ, ಕೆಲವೊಮ್ಮೆ ಬುದ್ಧಿಯ ಸೇರ್ಪಡೆ ಆಗುವುದಿಲ್ಲ ತಾನೆ. ಈಗೀಗ ಯಥಾರ್ಥ, ಈಗೀಗ ವ್ಯರ್ಥ ಇದೆಯೆಂದರೆ ಸೇರ್ಪಡೆಯಾಯಿತಲ್ಲವೆ.

**ಕಾರಣವನ್ನು ನಿವಾರಣೆ ಮಾಡಿಕೊಂಡಾಗ ಮಾಯೆ ಸಮಾಪ್ತಿಯಾಗುತ್ತದೆ.**

ವಿದೇಶದಲ್ಲಿ ಮಾಯೆಯು ಬರುತ್ತದೆಯೇ? ವಿದೇಶದವರ ಬಳಿ ಮಾಯೆಯು ಬರಬಾರದು ಏಕೆಂದರೆ ವಿದೇಶದಲ್ಲಿ ವರ್ತಮಾನ ಸಮಯದಲ್ಲಿ ಸ್ವಲ್ಪ ಸಮಯದಲ್ಲಿಯೇ ಮೇಲೇರುತ್ತಾರೆ ಮತ್ತು ಕೆಳಗೆ ಬೀಳುತ್ತಾರೆ. ಅಂದಮೇಲೆ ಸ್ವಲ್ಪ ಸಮಯದಲ್ಲಿಯೇ ಎಲ್ಲಾ ಪ್ರಕಾರದ ಅನುಭವವನ್ನು ಮಾಡಿ ಸಂಪೂರ್ಣ ಮಾಡಿದ್ದೀರಿ. ಹೇಗೆ ಯಾವುದೇ ವಸ್ತುವನ್ನು ಬಹಳ ತಿಂದರೆ ತೃಪ್ತಿಯಾಗಿ ಬಿಡುತ್ತದೆ. ಹಾಗೆಯೇ ವಿದೇಶದಲ್ಲಿಯೂ ಸಹ ಎಲ್ಲಾ ಪ್ರಕಾರದ ಫುಲ್‌ಫೋರ್ಸ್ ಇರುವ ಕಾರಣದಿಂದ ವಿದೇಶದ ಆತ್ಮರೀಗ ಸುಸ್ತಾಗಿದ್ದಾರೆ. ಅಂದಮೇಲೆ ಯಾರು ಸುಸ್ತಾಗಿರುತ್ತಾರೋ ಅವರಿಗೆ ಒಂದು ವೇಳೆ ವಿಶ್ರಾಂತಿಯು ಸಿಕ್ಕರೆ ಮಲಗುತ್ತಿದ್ದಂತೆ ಮಾಯವಾಗಿ ಬಿಡುತ್ತಾರೆ. ಆಳವಾದ ನಿದ್ರೆಯ ಅನುಭವ ಮಾಡುತ್ತಾರೆ. ಅಂದಮೇಲೆ ವಿದೇಶದವರಿಗೆ ಸ್ವಲ್ಪ ಸಮಯದಲ್ಲಿ ಮಾಯೆಯು ಬಹಳಷ್ಟು ಅನುಭವ ಮಾಡಿಸಿಬಿಡುತ್ತದೆ. ಈಗ ಏನು ಮಾಡಬೇಕಾಗಿದೆ? ಈಗಂತು ಹೊಸ ವಸ್ತುವಿನ ಅನ್ವೇಷಣೆಯಿತ್ತು, ಅದು ಸಿಕ್ಕಿತೆಂದರೆ ಮತ್ತೆ ಮಾಯೆಯೇಕೆ ಬರಬೇಕು? ಬರಬಾರದಲ್ಲವೆ, ಮತ್ತೇಕೆ ಬರುತ್ತದೆ? (ಮಾಯೆಯ ಹಳೆಯ ಗ್ರಾಹಕರಾಗಿದ್ದೇವೆ) ಮಾಯೆಗೂ ಸಹ ಒಳ್ಳೆಯ ಹೊಸಗ್ರಾಹಕರು ಸಿಕ್ಕರೆ, ಹಳೆಯ ಗ್ರಾಹಕರನ್ನು ತಾನಾಗಿಯೇ ಬಿಟ್ಟುಬಿಡುತ್ತದೆ. ಪರಿಪಾಲಿಸುವಶಕ್ತಿ ಇರುವವರ ಬಳಿ ಮಾಯೆಯು ಬರಲು ಸಾಧ್ಯವಿಲ್ಲ. ಮಾಯೆಯು ಎಲ್ಲಿ ನೋಡುತ್ತದೆ- ಕಾರ್ಯಕರ್ತರೆಲ್ಲರೂ ಬುದ್ಧಿವಂತರಾಗಿದ್ದಾರೆ, ಗಮನದಲ್ಲಿದ್ದಾರೆಂದರೆ ಎಂದರೆ ಅಲ್ಲಿ ಸಾಹಸವನ್ನಿಡಲು ಸಾಧ್ಯವೇ ಇಲ್ಲ. ಎಲ್ಲಿಯವರೆಗೆ ಪರಿಪಾಲಿಸುವಶಕ್ತಿ ಇದೆ ಎಂದು ಪರಿಶೀಲನೆ ಮಾಡಿರಿ ಮತ್ತು ಒಂದು ವೇಳೆ ಶಕ್ತಿಯಿಲ್ಲವೆಂದರೆ ಕಾರಣವೇನಾಗಿದೆ? ಕಾರಣವನ್ನು ನಿವಾರಣೆಯ ರೂಪದಲ್ಲಿ ಪರಿವರ್ತನೆ ಮಾಡಿರಿ. ಕಾರಣವು ಸಮಾಪ್ತಿಯಾಗುವುದು ಅರ್ಥಾತ್ ಮಾಯೆಯು ಸಮಾಪ್ತಿಯಾಯಿತು. ಮಾಯೆಯ ಮುಖ್ಯ ಸ್ವರೂಪವು ಕಾರಣದ ರೂಪದಲ್ಲಿಯೇ ಬರುತ್ತದೆ. ಕಾರಣವನ್ನು ನಿವಾರಣೆಯ ರೂಪದಲ್ಲಿ ಪರಿವರ್ತಿಸಿದಾಗ ಮಾಯೆಯು ಸದಾಕಾಲಕ್ಕಾಗಿ ಸಮಾಪ್ತಿಯಾಗಿ ಬಿಡುತ್ತದೆ.

ಇಂದಂತು ಮಿಲನ ಮಾಡುವುದಕ್ಕಾಗಿ ಬಂದಿದ್ದೇವೆ. ಮುರುಳಿಯನ್ನಂತು ಬಹಳಷ್ಟು ಕೇಳಿದಿರಿ, ಈಗ ಮಾಯೆಯು ಮುರುಳಿಯ ಮುಂದೆ ಅರ್ಪಣೆಯಾಗುವಂತಹ ಮುರುಳೀಧರರಾಗಿ. ಇಂತಹ ಮುರುಳೀಧರರಲ್ಲವೆ- ಆ ಸ್ಥೂಲಕೊಳಲಿನ ನಾದವನ್ನುಮಾಡುವವರಲ್ಲ ತಾನೇ? ಅದನ್ನಂತು ಬಹಳ ಚೆನ್ನಾಗಿ ನುಡಿಸುತ್ತೀರಿ ಈಗ ಇದರಲ್ಲಿಯೂ ಮುರುಳೀಧರರಾಗಿರಿ. ಮಾಯೆಯನ್ನು ಸಮರ್ಪಣೆ ಮಾಡಿಸುವ ಮುರುಳಿಯಾಗಿರಬೇಕು. ಈ ನಾದವನ್ನು ನುಡಿಸಲು ಸಾಧ್ಯವಿದೆಯಲ್ಲವೆ? ನಾದವನ್ನು ನುಡಿಸುವ ಆಸಕ್ತಿಯು ಮೆಜಾರಿಟಿಯಲ್ಲಿದೆ. ಯಾವ ಸಮಯದಲ್ಲಿ ನಾದವನ್ನು ನುಡಿಸುತ್ತೀರೋ ಆ ಸಮಯದಲ್ಲಿ ಇದನ್ನೂ ಯೋಚಿಸಿ- ಮಾಯಾಜೀತರಾಗುವ ರಹಸ್ಯದ ನಾದವು ಬರುತ್ತಿದೆಯೆ? ಒಂದು ವೇಳೆ ಈ ರಹಸ್ಯಯುಕ್ತ ನಾದವನ್ನು ಸದಾ ನುಡಿಸುತ್ತಿದ್ದರೆ ಮಾಯೆಯು ಸದಾಕಾಲಕ್ಕಾಗಿ ಸಮರ್ಪಣೆಯಾಗಿ ಬಿಡುತ್ತದೆ. ಇಂತಹ ನಾದವನ್ನು ನುಡಿಸಲು ಬರುತ್ತದೆಯೇ? ವಿದೇಶದವರೂ ಸಹ ಪದಮಪಟ್ಟು ಭಾಗ್ಯಶಾಲಿ ಆಗಿದ್ದಾರೆ. ದೂರದಿಂದ ಬರುತ್ತಾರೆ ಆದರೆ ಅವಕಾಶವೂ ಪದಮದಷ್ಟು ಸಿಗುತ್ತದೆ. ದೇಶದವರು ವರ್ಷದಲ್ಲಿ ಎಷ್ಟು ತೆಗೆದುಕೊಳ್ಳುತ್ತಾರೆಯೋ, ಅದಕ್ಕಿಂತಲೂ ಹೆಚ್ಚಿನದಾಗಿ ಸ್ವಲ್ಪ ಸಮಯದಲ್ಲಿಯೇ ಪ್ರಾಪ್ತಿಯಾಗುತ್ತದೆ. ವಿಶೇಷವಾದ ಪಾಲನೆಯು ಸಿಗುತ್ತಿದೆ.

**ನಿರ್ವಿಕಾರಿಯಾವುದೇ ವೈಯರ್ ಲೆಸ್.**

ಎಲ್ಲರ ದೃಷ್ಟಿಯು ತಾವು ವಿದೇಶದವರ ಮೇಲೆ ವಿಶೇಷವಾಗಿರುತ್ತದೆ. ಅಂದಮೇಲೆ ವಿಶೇಷ ಪಾಲನೆಯ ರೂಪ, ಪ್ರತ್ಯಕ್ಷ ಫಲದ ರೂಪದಲ್ಲಿ ವಿಶೇಷವಾಗಿ ಕಂಡು ಬರಬೇಕಾಗುತ್ತದೆ. ಹೇಗೆ ಸ್ಥಾಪನೆಯಲ್ಲಿ ವಿಶೇಷ ಪಾಲನೆಯು ನಡೆಯಿತೋ ಹಾಗೆಯೇ ಈಗಲೂ ಸಹ ತಮ್ಮ ವಿಶೇಷವಾದ ಪಾಲನೆಯು ನಡೆಯುತ್ತಿದೆ. ಅಂದಮೇಲೆ ಮೊದಲ ಪಾಲನೆಯವರ ಪಾಲನೆಗೆ ಫಲಿತವಾಗಿ ಸೇವೆಯ ಸ್ಥಾಪನೆಯಾಯಿತು. ಈಗ ತಾವು ಏನು ಮಾಡುತ್ತೀರಿ? ಸೇವೆಯ ಸಮಾಪ್ತಿ ಮಾಡುತ್ತೀರಿ ಮತ್ತು ಸಂಪೂರ್ಣತೆ ಹಾಗೂ ಪ್ರತ್ಯಕ್ಷತೆಯ ಹೆಸರನ್ನು ಪ್ರಸಿದ್ಧಗೊಳಿಸುತ್ತೀರಿ. ವಿದೇಶದವರೇ ಸಮಾಪ್ತಿಯ ದಿನಾಂಕವನ್ನು ನಿಗಧಿಪಡಿಸಬೇಕಾಗುತ್ತದೆ. ಮೊದಲಿನವರು ಸ್ಥಾಪನೆಯ ದಿನಾಂಕವನ್ನು ನಿಗಧಿಪಡಿಸಿದರು ಮತ್ತು ಈಗ ತಾವು ಸಮಾಪ್ತಿಯ ದಿನಾಂಕವನ್ನು ನಿಗಧಿಪಡಿಸಬೇಕಾಗುತ್ತದೆ. ಈಗ ಎಲ್ಲರ ನಿರೀಕ್ಷಣೆಯು ತಮ್ಮ ಮೇಲೆ ಇದೆ. ಬಾಪ್‌ದಾದಾರವರೊಂದಿಗೆ ಕೇಳುತ್ತಾರೆ ವಿನಾಶವು ಯಾವಾಗ ಆಗುತ್ತದೆ. ಆಗ ಹೇಳುತ್ತಾರೆ- ವಿದೇಶದವರೊಂದಿಗೆ ಕೇಳಿರಿ, ದೇಶದವರು ಸ್ಥಾಪನೆಯ ಜವಾಬ್ದಾರಿಯನ್ನು ತೆಗೆದುಕೊಂಡರು. ವಿದೇಶದವರೂ ಸಹ ಯಾವುದಾದರೂ ಜವಾಬ್ದಾರಿಯನ್ನು ತೆಗೆದುಕೊಳ್ಳುವರಲ್ಲವೆ. ವಿದೇಶವಿರುವುದೇ ವಿನಾಶಿ ಮತ್ತು ಭಾರತವು ಅವಿನಾಶಿ ಅಂದಾಗ ಭಾರತವಾಸಿಗಳು ಸ್ಥಾಪನೆಯದನ್ನು ಮಾಡಿದರು ಮತ್ತು ವಿದೇಶಿಗಳು ವಿನಾಶದ ಕಾರ್ಯಕ್ಕಾಗಿ ವಿಶೇಷವಾಗಿ ನಿಮಿತ್ತರಾಗುತ್ತಾರೆ. ಭಾರತವಾಸಿ ಮಕ್ಕಳು ಯಜ್ಞದ ಸ್ಥಾಪನೆಯಲ್ಲಿ ತನ್ನ ಆಹುತಿಯನ್ನಾಕಿ ಸ್ಥಾಪನೆ ಮಾಡಿದರು, ಯಜ್ಞದ ರಚನೆಯಾಯಿತು. ಮತ್ತು ತಾವುಗಳು ಮತ್ತೆ ಅಂತಿಮ ಆಹುತಿಯನ್ನು ಹಾಕಿ ಸಮಾಪ್ತಿ ಮಾಡಿರಿ. ನಂತರ ಜೈ-ಜೈಕಾರವಾಗುತ್ತದೆ. ಈಗ ಬೇಗಬೇಗನೆ ಅಂತಿಮ ಆಹುತಿಯನ್ನು ಹಾಕಿರಿ. ಎಲ್ಲರೂ ಸೇರಿ ಒಂದು ಸಂಕಲ್ಪದ ಸ್ವಾಹಾ ಮಾಡಿದರೂ ಸಮಾಪ್ತಿಯಾಗಿಬಿಡುತ್ತದೆ. ಇದರ ದಿನಾಂಕವನ್ನು ಯಾವಾಗ ಹೇಳುತ್ತೀರಿ? 80ರಲ್ಲಿ ಮಾಡುತ್ತೀರಾ ಅಥವಾ 81ರಲ್ಲಿ ಮಾಡುತ್ತೀರಾ- ಈ ದಿನಾಂಕವನ್ನು ತಿಳಿಸಿರಿ. (ಒಂದು ಬಾರಿ ಮಧುಬನಕ್ಕೆ ಮತ್ತೆ ಬರುತ್ತೇವೆ) ವಿನಾಶವು ಪ್ರಾರಂಭವಾದರೆ ಸದಾಕಾಲಕ್ಕಾಗಿ ಬಂದು ಬಿಡುತ್ತೀರಿ. ಆದಕ್ಕಾಗಿ ಇಲ್ಲಿ ದೊಡ್ಡಹಾಲ್ ನಿರ್ಮಾಣವಾಗುತ್ತಿದೆ. ಕೇವಲ ತಮ್ಮ ವೈರ್‌ಲೆಸ್ ಸೆಟ್‌ನ್ನು ಸರಿಯಾಗಿಟ್ಟುಕೊಳ್ಳಬೇಕು. ಇಲ್ಲಿಯ ವೈರ್‌ಲೆಸ್ ಆಗಿದೆ- ನಿರ್ವಿಕಾರಿಯಾಗುವುದೇ ವೈಸ್‌ಲೆಸ್, ಆಗ ಆ ವೈರ್‌ಲೆಸ್‌ನ ಮೂಲಕ ತಾವು ಬಂದು ಬಿಡಿ ಎಂಬ ಶಬ್ದವು ತಮ್ಮವರೆಗೂ ತಲುಪುತ್ತದೆ. ಒಂದು ವೇಳೆ ವೈರ್‌ಲೆಸ್ ಸೆಟ್ ಸರಿಯಾಗಿಲ್ಲವೆಂದರೆ ಶಬ್ದವೂ ಬರುವುದಿಲ್ಲ. ಬುದ್ಧಿಯೇ ಈ ಅಂತಿಮ ಡೈರೆಕ್ಶನ್‌ನ್ನು ಕ್ಯಾಚ್ ಮಾಡುತ್ತದೆ. ಆದ್ದರಿಂದ ಬೇಗಬೇಗನೆ ವೈರ್‌ಲೆಸ್ ಆದರೆ ಸಮಯವೂ ಬೇಗನೆ ಬಂದುಬಿಡುತ್ತದೆ. ಮೊದಲನೆಯದಾಗಿ ಶಕ್ತಿಶಾಲಿಯಾದ ಮೈಕ್‌ನ್ನು ತಯಾರು ಮಾಡಿರಿ. ಆ ಮೈಕ್‌ನ ಮೂಲಕ ಭಾರತದಲ್ಲಿ ಆ ಧ್ವನಿಯು ತಲುಪಲಿ ಮತ್ತು

ಆನಂತರ ಹೇಗೆ ಅವರ ಚುನಾವಣೆಯಾಗುತ್ತದೆ, ಒಂದು ದಿನದ ಮೊದಲು ಜಾಹೀರಾತಿನ(ಪ್ರಸಾರ) ಸಾಧನವೆಲ್ಲವುಗಳನ್ನೂ ಬಂದ್ ಮಾಡಿ ಬಿಡುತ್ತಾರೆ. ಆನಂತರ ನಿರೀಕ್ಷಣೆ ಮಾಡಲಾಗುತ್ತದೆ. ಅಂದಮೇಲೆ ಮೊದಲನೆಯದಾಗಿ ಮೈಕ್‌ನ ಮೂಲಕ ಧ್ವನಿಯನ್ನು ಹರಡಿಸಿರಿ, ಆಗ ಅವರೂ ಸೈಲೆನ್ಸ್ ಆಗಿಬಿಡುತ್ತಾರೆ, ನಂತರ ಫಲಿತಾಂಶವು ಹೊರಬರುತ್ತದೆ. ಈಗ ಜಾಹೀರಾತಿನ ಮೈಕ್ ಎಲ್ಲಿಯವರೆಗೆ ತಯಾರು ಮಾಡಲಾಗಿದೆ? ಮೊದಲು ಧ್ವನಿಯನ್ನು ಹರಡಿಸಿರಿ ನಂತರ ಇಂತಹ ಸನ್ನಾಟ (ಮಾತನಾಡಿಕೊಳ್ಳುವಂತಹ) ಶಾಂತಿಯಾಗುತ್ತದೆ, ಆಗ ಧ್ವನಿಯನ್ನು ಹರಡಿಸುವ ಪಾತ್ರವೂ ಸಮಾಪ್ತಿಯಾಗಿ ಬಿಡುತ್ತದೆ ಮತ್ತು ಪರಿವರ್ತನೆಯಾಗುತ್ತದೆ. ಈಗಂತು ಮೊದಲ ಸ್ಟೇಜ್ ನಡೆಯುತ್ತಿದೆಯಲ್ಲವೆ. ಮೊದಲ ಸ್ಥಿತಿಯಲ್ಲಿ ಸಮಯವು ಹಿಡಿಸುತ್ತದೆ, ಎರಡನೇಯ ಸ್ಥಿತಿಯಲ್ಲಿ ಸಮಯವು ಹಿಡಿಸುವುದಿಲ್ಲ.

**ಆಸ್ಟ್ರೇಲಿಯಾ ಪಾರ್ಟಿ:-**

ಆಸ್ಟ್ರೇಲಿಯಾದ ಸರ್ವ ಮಕ್ಕಳಲ್ಲಿ ಅತಿದೊಡ್ಡ ವಿಶೇಷತೆಯೇನಾಗಿದೆ? ತಿಳಿದಿದ್ದೀರಾ? ಆಸ್ಟ್ರೇಲಿಯಾದವರು ಬೇರೆ ಧರ್ಮದಲ್ಲೇನು ಪಾತ್ರವನ್ನಭಿನಯಿಸುವ ಸಮಯವು ನಿಮಿತ್ತಮಾತ್ರ ಇತ್ತು. ಆ ಸಮಯವು ಈಗ ಸಮಾಪ್ತಿಯಾಗಿದೆ ಆದ್ದರಿಂದ ತಮ್ಮ ಧರ್ಮದ ಪರಿಚಯವು ಸಿಗುವುದರಿಂದ ಸಹಜ ಹಾಗೂ ಬೇಗನೆ ಬಂದು ಬಿಟ್ಟರು ಮತ್ತು ನಂತರ ಅನ್ಯರನ್ನೂ ಅದರಿಂದ ತೆಗೆಯುವ ಬಹಳ ಉಮ್ಮಂಗವಿದೆ. ಅಂದಮೇಲೆ ಇದರಿಂದ ಸಿದ್ಧವಾಗುತ್ತದೆ- ತಾತ್ಕಾಲಿಕ ಸಮಯಕ್ಕಾಗಿ ಅನ್ಯಧರ್ಮದಲ್ಲಿ ಹೋದರು, ಅದು ಸಮಾಪ್ತಿಯಾಯಿತು ಆದ್ದರಿಂದ ಇದೂ ವಿಶೇಷತೆಯಿದೆ – ಯಾರೇ ಬರುತ್ತಾರೆ, ಮೆಜಾರಿಟಿಯಲ್ಲಿ ಅವರು ನನ್ನವರೆನಿಸುತ್ತದೆ, ಬೇರೆ ಧರ್ಮದವರೆನಿಸುವುದಿಲ್ಲ. ಆಸ್ಟ್ರೇಲಿಯಾ ಅಥವಾ ವಿದೇಶದವರಾಗಿದ್ದರೂ ಚಾತ್ರಕ ಆತ್ಮರೆನಿಸುತ್ತದೆ, ಅಂದಮೇಲೆ ಆತ್ಮನ ಚಾತ್ರಕತನವು ಸಿದ್ಧ ಮಾಡುತ್ತದೆ. ನಮ್ಮ ಧರ್ಮದವರಾಗಿದ್ದಾರೆ. ತಮಗೂ ಸಹ ಇದೇ ರೀತಿ ಅನುಭವವಾಗುತ್ತದೆ ಅಲ್ಲವೆ- ತಪ್ಪಾಗಿ ಬೇರೆಕೊಂಬೆಯಲ್ಲಿ ಹೊರಟುಹೋಗಿದ್ದೆವು. ಸೇವೆಗಾಗಿ ಈ ಸ್ವಲ್ಪ ಸಮಯದ ಪಾತ್ರವು ಸಿಕ್ಕಿದೆ. ಇಲ್ಲವೆಂದರೆ ವಿದೇಶದ ಸೇವೆಯು ಹೇಗಾಗುತ್ತದೆ? ಅಲ್ಲಿನವರು ನಿಮಿತ್ತವಾಗಿ ವಿದೇಶದ ಸೇವೆಯನ್ನು ಮಾಡಿಸುತ್ತಿದ್ದಾರೆ. ಹೇಗೆ ಕಲ್ಪದ ಮೊದಲಿನ ಗಾಯನವೂ ಇದೆ- ಪಾಂಡವರು ಗುಪ್ತವೇಶದಲ್ಲಿ ಇಲ್ಲಿ ಅಲ್ಲಿ ಸೇವೆಗಾಗಿ ಹೋಗಿದ್ದರು. ಅಂದಮೇಲೆ ತಾವೂ ಸಹ ರೂಪ-ಧರ್ಮದಲ್ಲಿ ಪರಿವರ್ತನೆಯನ್ನು ಮಾಡಿಕೊಂಡು, ಪಾಂಡವಸೇನೆಯ ಸೇವೆಗಾಗಿ ಹೋಗಿದ್ದೀರಿ, ಆದರೆ ಪಾಂಡವ ಸೇನೆಯವರಾಗಿದ್ದೀರಿ. ಈಗಂತು ಧರ್ಮ, ದೇಶ, ಗುಣ ಮತ್ತು ಕರ್ತವ್ಯವೆಲ್ಲವೂ ಬದಲಾಯಿತಲ್ಲವೆ? ಆಸ್ಟ್ರೇಲಿಯಾದ ನಿವಾಸಿಗೆ ಬದಲಾಗಿ ಅಲ್ಲಿದ್ದರೂ ಮಧುಬನ ನಿವಾಸಿಯೆಂದು ತಿಳಿದುಕೊಂಡು ನಡೆಯ ದತ್ ತೀರ ನ್ ಹವೆ. ಹುಟ್ಟಿದ ಮನೆಯು ಮಧುಬನವಾಗಿದೆ. ಸಾಕಾರ ಮನೆಯು ಮಧುಬನ ಮತ್ತು ನಿರಾಕಾರಿ ಮನೆಯು ಪರಮಧಾಮವಾಗಿದೆ. ಆಸ್ಟ್ರೇಲಿಯಾ ತಮ್ಮ ಕಛೇರಿಯಾಗಿದೆ, ಹೇಗೆ ಕಛೇರಿಯಲ್ಲಿ ಕಾರ್ಯಕ್ಕಾಗಿ ಹೋಗುತ್ತಾರೆ ಹಾಗೆಯೇ ತಾವೂ ಸಹ ಸೇವೆಗಾಗಿ ಹೋಗುತ್ತಿದ್ದೀರಿ. ಕಛೇರಿಯಲ್ಲಿ ಹೋಗುತ್ತೀರೆಂದರೆ ಮನೆಯನ್ನಂತು ಮರೆಯುವುದಿಲ್ಲ ಅಲ್ಲವೆ. ಅಂದಮೇಲೆ ಒಂದು ವೇಳೆ ಯಾರಾದರೂ ಮನೆಯ ವಿಳಾಸವನ್ನು ಕೇಳುತ್ತಾರೆಂದರೆ ಏನು ಕೊಡುತ್ತೀರಿ? (ಪಾಂಡವಭವನ) ಇದೇ ಸ್ಮೃತಿಯಲ್ಲಿ ಇರುವುದರಿಂದ ಸದಾ ಉಪರಾಂ ಸ್ಥಿತಿಯಲ್ಲಿರುತ್ತೀರಿ. ಕಛೇರಿಯ ವಸ್ತುವಿನಲ್ಲೆಂದೂ ಸೆಳೆತವಾಗುವುದಿಲ್ಲ ಏಕೆಂದರೆ ತಿಳಿಯುತ್ತೀರಿ- ಇದು ಸೇವೆಗಾಗಿ ವಸ್ತುವಿದೆ, ನಮ್ಮದಲ್ಲ. ಅಂದಮೇಲೆ ಇದೇ ರೀತಿ ಉಪರಾಂ ಆಗಿರುತ್ತೀರಾ? ಎಷ್ಟೇ ಪ್ರಿಯವಾದ ವಸ್ತುವಾಗಿರಬಹುದು ಅಥವಾ ಆಕರ್ಷಣೆ ಮಾಡುವ ಸೇವಾ ಜೊತೆಗಾರರಿರಬಹುದು ಆದರೆ ಕಛೇರಿಯಲ್ಲಿ ಕೆಲಸ ಮಾಡುವವರಿಗಾಗಿ ನಿಯಮವಿರುತ್ತದೆ, ಕೆಲಸಕ್ಕಾಗಿ ಜೊತೆಗಾರರಾದಿರಿ ಮತ್ತೆ ಭಿನ್ನವಾದಿರಿ. ಒಂದು ವೇಳೆ ಮರೆತು ಪರಸ್ಪರದಲ್ಲೇನಾದರೂ ಪ್ರೀತಿ ಉಂಟಾಗುತ್ತದೆ ಎಂದರೆ ಒಳ್ಳೆಯದೆಂದು ಒಪ್ಪುವುದಿಲ್ಲ. ಮನೆಯವರೊಂದಿಗೆ ಸ್ನೇಹ ಇರುತ್ತದೆ. ಕಛೇರಿಯಲ್ಲಿರುವವರಿಂದ ಕೆಲಸವನ್ನು ನಡೆಸಬೇಕಾಗುತ್ತದೆ, ಅಂದಮೇಲೆ ಇದೇ ರೀತಿ ನಡೆಯಬೇಕು.

ಆಸ್ಟ್ರೇಲಿಯಾದವರು ಸೇವೆಯನ್ನು ಮುಂದುವರೆಸಿದ್ದೀರಲ್ಲವೆ. ಈಗ ಎಷ್ಟು ಸ್ಥಾನಗಳಿವೆ, ಅಲ್ಲಿ ಪ್ರತಿಯೊಬ್ಬರೂ ತಮ್ಮ-ತಮ್ಮ ಪ್ರಜೆಗಳನ್ನು ಖಂಡಿತವಾಗಿಯೂ ಮಾಡಿಕೊಳ್ಳಲೇಬೇಕಾಗಿದೆ. (ವಿನಾಶದಲ್ಲಿ ನಮ್ಮದೇನಾಗುತ್ತದೆ?) ವಿನಾಶದಲ್ಲಿ ಇಡೀ ಆಸ್ಟ್ರೇಲಿಯಾವು ಒಂದು ದ್ವೀಪವಾಗಿಬಿಡುತ್ತದೆ. ಸ್ವಲ್ಪ ನೀರಿನಲ್ಲಿ ಬಂದುಬಿಡುತ್ತದೆ, ಸ್ವಲ್ಪಮಾತ್ರ ಮೇಲೆ ಉಳಿದುಕೊಳ್ಳುತ್ತದೆ. ತಾವುಗಳು ಸುರಕ್ಷಿತವಾಗಿರುತ್ತೀರಿ. ವಿನಾಶಕ್ಕೆ ಮೊದಲೇ ತಮಗೆ ಶಬ್ದವು ತಲುಪುತ್ತದೆ. ಯಾವಾಗ ನೀವೆಲ್ಲರೂ ಸುರಕ್ಷಿತ ಸ್ಥಾನದಲ್ಲಿತಲುಪುತ್ತೀರಿ, ಆನಂತರ ವಿನಾಶವಾಗುತ್ತದೆ. ಹೇಗೆ ಗಾಯನವಿದೆ ಭಟ್ಟಿಯಲ್ಲಿ ಬೆಕ್ಕಿನ ಮರಿಗಳು ಸುರಕ್ಷಿತವಾಗಿದ್ದವು..... ಅಂದಮೇಲೆ ಯಾವ ಮಕ್ಕಳು ತಂದೆಯ ಸ್ಮೃತಿಯಲ್ಲಿರುವವರಾಗಿದ್ದಾರೆ, ಅವರು ವಿನಾಶದಲ್ಲಿ ವಿನಾಶವಾಗುವುದಿಲ್ಲ ಆದರೆ ನಿರ್ಭಯದಿಂದ ಶರೀರ ಬಿಡುತ್ತಾರೆ, ವಿನಾಶದ ಪರಿಸ್ಥಿತಿಯಲ್ಲಿ ಶರೀರ ಬಿಡುವುದಿಲ್ಲ. ಇದಕ್ಕಾಗಿ ಒಂದು ಬುದ್ಧಿಯ ಲೈನ್ ಕ್ಲಿಯರ್ ಆಗಿರಲಿ ಮತ್ತು ಇನ್ನೊಂದು ಅಶರೀರಿಯಾಗುವ ಅಭ್ಯಾಸವು ಬಹಳ ಇರಬೇಕು. ಯಾವುದೇ ಮಾತಿರಬಹುದು, ಆದರೆ ತಾವು ಅಶರೀರಿಯಾಗಿ ಬಿಡಬೇಕು. ತಾವು ತಮ್ಮ ಶರೀರವನ್ನು ಬಿಡುವ ಸಂಕಲ್ಪವು ಯಾವಾಗ ಬರುತ್ತದೆ, ಆಗ ಸಂಕಲ್ಪ ಮಾಡಿದಿರಿ ಮತ್ತು ಹೊರಟು ಹೋಗುತ್ತೀರಿ. ಇದಕ್ಕಾಗಿ ಬಹಳ ಸಮಯದಿಂದ ಅಭ್ಯಾಸವಿರಬೇಕಾಗಿದೆ. ಯಾರು ಬಹಳ ಸಮಯದ ಸ್ನೇಹಿ ಮತ್ತು ಸಹಯೋಗಿಯಾಗಿರುತ್ತಾರೆ, ಅವರಿಗೆ ಅಂತ್ಯದಲ್ಲಿ ಅವಶ್ಯವಾಗಿ ಸಹಯೋಗವು ಸಿಗುತ್ತದೆ. ಇಂತಹ ಅನುಭವ ಮಾಡುತ್ತೀರಿ - ಹೇಗೆ ಸ್ಥೂಲ ವಸ್ತ್ರವನ್ನು ತೆಗೆಯುತ್ತಿದ್ದೇವೆ. ಅದೇ ರೀತಿ ಶರೀರವನ್ನು ಬಿಡುತ್ತೀರಿ. ಇಡೀ ದಿನದಲ್ಲಿ ನಡೆಯುತ್ತಾ- ನಡೆಯುತ್ತಾ ಮಧ್ಯಮಧ್ಯದಲ್ಲಿ ಅಶರೀರಿಯಾಗುವ ಅಭ್ಯಾಸವನ್ನು ಮಾಡಿರಿ. ಹೇಗೆ ಟ್ರಾಫಿಕ್ ಕಂಟ್ರೋಲ್‌ನ ಹಾಡನ್ನು ಹಾಕಲಾಗುತ್ತದೆಯೆಂದರೆ, ಅಲ್ಲಿ ಕಾರ್ಯದಲ್ಲಿದ್ದರೂ ಮಧ್ಯ-ಮಧ್ಯದಲ್ಲಿ ತಮ್ಮ ಕಾರ್ಯವನ್ನು ತಾವೇ ಸೆಟ್ ಮಾಡಿಕೊಂಡು ಬಿಡಬೇಕು, ಅದರಿಂದ ಲಿಂಕ್ ಜೋಡಣೆ ಆಗಿರುತ್ತದೆ. ಇದರಿಂದ ಅಭ್ಯಾಸವಾಗುತ್ತಾ ಹೋಗುತ್ತದೆ.

ತಾವುಗಳಲ್ಲಿ ಇದೂ ಒಂದು ವಿಶೇಷತೆಯಿದೆ- ಯಾವಾಗ ಬೇಕು, ಆಗ ನೌಕರಿಯನ್ನು ಬಿಡಬಹುದು, ಯಾವಾಗ ಬೇಕು ಮಾಡಬಹುದು, ನಿರ್ಬಂಧನರಾಗಿದ್ದೀರಿ. ಕೇವಲ ಮನಸ್ಸು ಮತ್ತು ಸಂಸ್ಕಾರಗಳ ಬಂಧನವಿರಬಾರದು. ಹಾಗೆಯೇ ದೇಹ ಮತ್ತು ದೇಹದ ಧರ್ಮಗಳಿಂದಲೂ ನಿರ್ಬಂಧನರಾಗಿದ್ದೀರಿ. ಅರ್ಧಬಂಧನಗಳಿಂದ ಮೊದಲೇ ನಿರ್ಬಂಧನವಾಗಿದ್ದೀರಿ, ಉಳಿದ ಸ್ವಲ್ಪ ಬಂಧನಗಳನ್ನು ನೆನಪು ಮತ್ತು ಸೇವೆಯಿಂದ ಸಮಾಪ್ತಿ ಮಾಡಿಬಿಡಬೇಕು. ಎಲ್ಲರೂ ಹೈಜಂಪ್ ಮಾಡುವವರಾಗಿದ್ದೀರಿ.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 04-01-1980.

***ವರ್ತಮಾನದ ರಾಜ್ಯಾಧಿಕಾರಿಯೇ ಭವಿಷ್ಯದ ರಾಜ್ಯಾಧಿಕಾರಿ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ವರ್ತಮಾನ ಮತ್ತು ಭವಿಷ್ಯದ ಡಬಲ್ ರಾಜ್ಯಾಧಿಕಾರಿ.

2. ನಾನು ವರ್ತಮಾನ ಸ್ಥಿತಿಯ ದರ್ಪಣದಿಂದ ಭವಿಷ್ಯವನ್ನು ಸ್ಪಷ್ಟವಾಗಿ ತಿಳಿದಿದ್ದೇನೆ.

3. ನಾನು ಸೂಕ್ಷ್ಮ ಶಕ್ತಿಗಳಾದ ಮನಸ್ಸು, ಬುದ್ಧಿ, ಸಂಸ್ಕಾರಗಳನ್ನು ನಡೆಸುವ ರಾಜ್ಯಾಧಿಕಾರಿ.

4. ನಾನು ಆದಿಶಕ್ತಿಯನ್ನು (ಮನಸ್ಸು) ನನ್ನ ಅಧಿಕಾರದ ಶಕ್ತಿಯ ಆಧಾರದಿಂದ ಸಹಯೋಗಿ ಮತ್ತು ವಿಶೇಷ ಕಾರ್ಯಕರ್ತನನ್ನಾಗಿ ಮಾಡಿಕೊಂಡಿದ್ದೇನೆ.

5. ನನ್ನ ಸ್ವರಾಜ್ಯದಲ್ಲಿ ಒಂದೇ ರಾಜ್ಯ, ಒಂದೇ ಧರ್ಮ ಮತ್ತು ತ್ರಿಮೂರ್ತಿ ಶಕ್ತಿಗಳನ್ನು ಆಜ್ಞೆಯನುಸಾರ ನಡೆಸುವ ಡಬಲ್ ಪರಿಪಾಲಕನು.

6. ನಾನು ಅಧಿಕಾರ ಶಕ್ತಿಯಿಂದ ತ್ರಿಮೂರ್ತಿ ಶಕ್ತಿಗಳನ್ನು (ಮನಸ್ಸು, ಬುದ್ಧಿ, ಸಂಸ್ಕಾರ) ನಡೆಸುವ ಮತ್ತು ಅವುಗಳ ಆಧಾರದಿಂದ ಕರ್ಮೇಂದ್ರಿಯಗಳನ್ನು ಕೂಡ ನಡೆಸುವ ಪರಿಪಾಲನಾಶಕ್ತಿ ಸ್ವರೂಪ.

7. ನಾನು ಕಾರಣವನ್ನು ನಿವಾರಣೆ ಮಾಡಿ ಮಾಯೆಯನ್ನು ಸದಾ ಕಾಲಕ್ಕಾಗಿ ಸಮಾಪ್ತಿ ಮಾಡಿಕೊಂಡಿರುವ ಮಾಯಾಜೀತ್ ಸ್ವರೂಪ.

8. ನಾನು ವಯರ್ ಲೆಸ್ ಸೆಟ್ ಆಗಿ (ನಿರ್ವಿಕಾರಿ) ಶಬ್ದವನ್ನು ಕೇಳಿ, ಸಲಹೆಯನ್ನು ಗ್ರಹಿಸಿದ್ದೇನೆ .

9.ನಾನು ಮೈಕ್ ಆಗಿ ಭಗವಂತನು ಭಾರತ ದೇಶದಲ್ಲಿ ಅವತರಿಸಿದ್ದಾನೆ ಎಂಬ ಧ್ವನಿಯನ್ನು ಹರಡಿಸಿದ್ದೇನೆ.